ನಿಲ್ಲದ ಹೊರಗುತ್ತಿಗೆ ನೌಕರರ ಮುಷ್ಕರ

- 3ನೇ ದಿನಕ್ಕೆ ಕಾಲಿಟ್ಟ ಪ್ರತಿಭಟನೆ
- ಕಾಯಂಗಾಗಿ ನೌಕರರ ಪಟ್ಟು

ಬೆಂಗಳೂರು: ಸರ್ಕಾರಿ ಹಾಸ್ಟೆಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಮುಂದುವರೆಸಬೇಕೆಂದು ಒತ್ತಾಯಿಸಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಪ್ರತಿಭಟನೆ ಎರಡನೇ ದಿನಕ್ಕೆ ಕಾಲಿಟ್ಟಿದೆ.

ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಆವರಣದಲ್ಲಿ ಮಂಗಳವಾರ ಅನಿರ್ದಿಷ್ಟಾವಧಿ ಮುಷ್ಕರವನ್ನು ಆರಂಭಿಸಿದ್ದ ಹೊರಗುತ್ತಿಗೆ ನೌಕರರು, ರೈಲ್ವೆ ನಿಲ್ದಾಣದ ಆವರಣದಲ್ಲೇ ಮಲಗುವ ಮೂಲಕ ತಮ್ಮ ಪ್ರತಿಭಟನೆಯನ್ನು ಮುಂದುವರೆಸಿದ್ದಾರೆ. ಮುಷ್ಕರದಲ್ಲಿ 300ಕ್ಕೂ ಅಧಿಕ ಮಂದಿ ನೌಕರರು ಹಾಗೂ ಮಹಿಳಾ ನೌಕರರು ತಮ್ಮ ಪುಟ್ಟ ಮಕ್ಕಳೊಂದಿಗೆ ಶೋಚನೀಯ ಸ್ಥಿತಿ ಅನುಭವಿಸುತ್ತಿದ್ದರು. ಪ್ರತಿಭಟನಾನಿರತರನ್ನು ಉದ್ದೇಶಿಸಿ ಮಾತನಾಡಿದ ಸಂಘದ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ, ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಎಸ್ಸಿ,ಎಸ್ಟಿ, ಹಿಂದುಳಿದ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಲ್ಲಿ ಅಡುಗೆ, ಸ್ವಚ್ಛತೆ, ಕಾವಲು ಮುಂತಾದ ಕೆಲಸಗಳನ್ನು ಮಾಡುತ್ತಿರುವ ನೌಕರರು ಹಲವಾರು ವರ್ಷಗಳಿಂದ ಗುತ್ತಿಗೆ, ದಿನಗೂಲಿ ನೌಕರರರಾಗಿ ದುಡಿಯುತ್ತಿದ್ದಾರೆ. ಕಾಯಂ ಸ್ವರೂಪದ ಕೆಲಸಕ್ಕಾಗಿ ಅವರನ್ನು ನಿಯೋಜಿಸಿದರೂ ನೌಕರರನ್ನು ಕಾಯಂಗೊಳಿಸಿ ಅವರಿಗೆ ಕಾನೂನು ಬದ್ಧವಾಗಿ ವೇತನ ಮತ್ತು ಇನ್ನಿತರೆ ಸೌಲಭ್ಯಗಳನ್ನು ನೀಡುತ್ತಿಲ್ಲ. ನೌಕರರನ್ನು ಸೇವೆಯಲ್ಲಿ ಮುಂದುವರೆಸುವ ಸಂಬಂಧ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ಅವರು ಲಿಖಿತ ಭರವಸೆ ನೀಡುವವರೆಗೂ ಪ್ರತಿಭಟನೆ ಮುಂದುವರೆಸುವುದಾಗಿ ತಿಳಿಸಿದರು.

ಬೇಡಿಕೆ ಈಡೇರಿಸಿ

ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ ಮಾತನಾಡಿ, ಐದು ವರ್ಷ ನಂತರ ಸೇವೆ ಸಲ್ಲಿಸಿದ ಎಲ್ಲ ಹಾಸ್ಟೆಲ್ ಹಾಗೂ ವಸತಿ ಶಾಲೆ ದಿನಗೂಲಿ ನೌಕರರ ಸೇವೆಯನ್ನು ಕಾಯಂಗೊಳಿಸಿ ಅವರನ್ನು ಸರಕಾರಿ ನೌಕರರೆಂದು ಘೋಷಿಸಬೇಕು. ಎನ್‌ಜಿಒಗಳ ಮೂಲಕ ದುಡಿಸುವುದನ್ನು ಕೈಬಿಡಬೇಕು. ಹಾಸ್ಟೆಲ್ ನೌಕರರಿಗೆ ವೇತನ ಹಾಗೂ ತುಟ್ಟಿಭತ್ಯೆ ಸೇರಿ ತಿಂಗಳಿಗೆ ಕನಿಷ್ಠ 10 ಸಾವಿರ ರೂ.ಗಳಷ್ಟು ವೇತನ ನೀಡಬೇಕು.

ಇದುವರೆಗೂ 2009ರ ಗೆಜೆಟ್ ನೋಟಿಫಿಕೇಷನ್ ನಿಗದಿಪಡಿಸಿದ ಮೂಲ ವೇತನ ಹಾಗೂ ತುಟ್ಟಿಭತ್ಯೆ ಸಹಿತ ಸಂಬಳವನ್ನು ಯಾವುದೇ ತಾರತಮ್ಯವಿಲ್ಲದೆ ಸಂದಾಯ ಮಾಡಬೇಕೆಂದರು.

ಮಾರಕ ರೋಗಗಳು ಕಾಡುತ್ತಿವೆಯೇ...

ಸಕ್ಕರೆ ಕಾಯಿಲೆ | ಬಿಪಿ | ಸಂಧಿನೋವು | ಮೂತ್ರಪಿಂಡ | ಕಿಡ್ನಿ ಸ್ಟೋನ್ | ಗ್ಯಾಸ್ಟ್ರಿಕ್ | ಲೀವರ್ ಮೊದಲಾದ ರೋಗಗಳಿಗೆ ರಾಮಬಾಣ

ಮಿರಾಕಲ್ ಮೆಡಿಸಿನ್

ಚಿಂತೆ ಬೇಡ

ಅಧ್ಯಯನ - ಸಂಶೋಧನೆ ಮೂಲಕ ರೂಪಿಸಿರುವ ಆಯುರ್ವೇದ ಔಷಧ

ಔಷಧಿ ದೊರೆಯುವ ಸ್ಥಳ
ಸಂಯುಕ್ತ ಕರ್ನಾಟಕ ಕಾರ್ಯಾಲಯ
ನಂ.2, ರೆಸಿಡೆನ್ಸಿ ರಸ್ತೆ, ಬೆಂಗಳೂರು-25
080-22273265/22214392
ಮೊ: 91089 92560

ಮಾಧ್ಯಮ ಸಹಯೋಗ
ಸಂಯುಕ್ತ ಕರ್ನಾಟಕ
ಹೆಮ್ಮೆಯ ದತ್ತಿ ಯೋಜನೆ

ಬಿಹಾರದ ಐಎಎಸ್
ಅಧಿಕಾರಿ
ಎಸ್.ಎಂ.ರಾಜು
ಅವಿರತ ಶ್ರಮದ
ಪ್ರತಿಫಲ ಈ ಔಷಧಿ

ಎಸ್.ಎಂ.ರಾಜು
ಹಿರಿಯ ಐಎಎಸ್ ಅಧಿಕಾರಿ

ನಂ.254, ಶ್ರೀ ಸಿದ್ದೇಶ್ವರ ಸರ್ಕಲ್, ಎಂ.ಜಿ. ರೋಡ್, ಚಿಕ್ಕಬಳ್ಳಾಪುರ. 08156272076
ಶ್ರೀನಿವಾಸ ನಂ.1455, 4ನೇ ಅಡ್ಡರಸ್ತೆ, ಪಿಸಿ ಬಡಾವಣೆ, ಕೋಲಾರ. 8152225317.
ಮೊ: 91089 92560

ಚುನಾವಣೆ: ಗೆಲುವಿಗೆ ಬಿಜೆಪಿ ರಣತಂತ್ರ

- ಮತಗಟ್ಟೆಗಳಿಗೆ ತೆರಳಿದ ವಿಸ್ತಾರಕರು
- ಕೇಂದ್ರ ಸಾಧನೆ ಬಗ್ಗೆ ಮನವರಿಕೆ
- ತಳಮಟ್ಟದಲ್ಲಿ ಪಕ್ಷದ ಬಲವರ್ಧನೆ

ಬೆಂಗಳೂರು: ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬರುವ ಸಂಕಲ್ಪ ಮಾಡಿರುವ ಬಿಜೆಪಿ ಇದಕ್ಕಾಗಿ ಉತ್ತರಪ್ರದೇಶ ಮಾದರಿ ಅನುಸರಿಸಲು ಮುಂದಾಗಿದೆ. 24 ಸಾವಿರ ವಿಸ್ತಾರಕರನ್ನು ಪಕ್ಷದ ಬಲವರ್ಧನೆಗೆ ರಾಜ್ಯದೆಲ್ಲಡೆ ಕಳುಹಿಸಲಿದೆ.

ಈ ವಿಸ್ತಾರಕರ ಯೋಜನೆಗೆ ಪಕ್ಷದ ರಾಜ್ಯಾಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಬುಧವಾರ ಪಕ್ಷದ ಕಚೇರಿಯಲ್ಲಿ ಚಾಲನೆ ನೀಡಿದರು. ಶಾಸಕರು, ಮಾಜಿ ಸಚಿವರೂ ವಿಸ್ತಾರಕರಾಗಿ ತೆರಳಲಿದ್ದಾರೆ. 54,431 ಬೂತ್‌ಗಳಲ್ಲಿ ಇವರು 15 ದಿನಗಳ ಕಾಲ ವಾಸ್ತವ್ಯ ಮಾಡಿ ಪಕ್ಷದ ಸಂಘಟನೆ ಕೆಲಸ ಮಾಡಲಿದ್ದಾರೆ.

ಈ ಅವಧಿಯಲ್ಲಿ ಕನಿಷ್ಠ 4 ದಿನಗಳ ಕಾಲ ಕೇಂದ್ರ ಸರ್ಕಾರದ ಸಾಧನೆ ವಿವರಿಸುವುದು, ಉಳಿದ ಅವಧಿಯಲ್ಲಿ ಅನ್ಯ ಪಕ್ಷಗಳ ಮುಖಂಡರ ಭೇಟಿ, ಪ್ರತಿದಿನ 25 ಮನೆಗಳಿಗೆ ಭೇಟಿ ನೀಡಿ ಪ್ರಧಾನಿ ಚಿತ್ರದ ಸ್ಟಿಕರ್ ಅಂಟಿಸುವುದು, ಪ್ರತಿ ಬೂತ್‌ನಲ್ಲಿ ಶೇ.60 ಕ್ಕಿಂತ ಅಧಿಕ ಮತ ಪಡೆಯಲು ಯೋಜನೆ ರೂಪಿಸುವುದು ಇದರಲ್ಲಿ ಸೇರಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಯಡಿಯೂರಪ್ಪ, ಕೇಂದ್ರ ಸರ್ಕಾರ ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಪ್ರತಿ ಕ್ಷೇತ್ರದಲ್ಲಿ ಜಾಗೃತಿ ಮೂಡಿಸಿ, ಅನ್ಯ ರಾಜಕೀಯ ಪಕ್ಷಗಳ ಮುಖಂಡರು, ವಿದ್ಯಾರ್ಥಿಗಳು, ವಕೀಲರ ಜತೆ ಸಂಪರ್ಕ ಬೆಳೆಸಿ, ಆಯಾ ಕ್ಷೇತ್ರದಲ್ಲಿ ಪಕ್ಷದ ಸ್ಥಿತಿಗತಿ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಿ ಎಂದು ಹೇಳಿದರು.

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ 150 ಸ್ಥಾನಗಳ ಗುರಿ ಮುಟ್ಟುವಂತೆ ಮಾಡುವಲ್ಲಿ ನೀವು ನೀಡುವ ವರದಿಗಳು ಸಹಕಾರಿ ಆಗಿರಬೇಕು ಎಂದು ಕಿವಿ ಮಾತು ಹೇಳಿದರು.ಅನ್ನಭಾಗ್ಯ ಯೋಜನೆ ಕೇಂದ್ರ ಸರ್ಕಾರದ ಯೋಜನೆ. ಕೇಂದ್ರ ಸರ್ಕಾರ 32 ರೂ.ಗೆ ಅಕ್ಕಿ ಖರೀದಿಸಿ 3 ರೂ.ಗೆ ರಾಜ್ಯ ಸರ್ಕಾರಕ್ಕೆ ನೀಡುತ್ತಿದೆ. ರಾಜ್ಯ ಸರ್ಕಾರ ಅದನ್ನು ಅನ್ನಭಾಗ್ಯದ ಹೆಸರಿನಲ್ಲಿ ಪ್ರಚಾರ ಮಾಡುತ್ತಿದೆ. ಈ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡಿ ಎಂದು ಯಡಿಯೂರಪ್ಪ ಹೇಳಿದರು.

ರೈತರ ಸಾಲಮನ್ನಾ ವಿಷಯದಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ವಿರುದ್ಧ ರೈತರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿನ ಸಾಲಮನ್ನಾ ಮಾಡಬೇಕು ಎನ್ನುವ ಮೂಲಕ ಕೇಂದ್ರದ ವಿರುದ್ಧ ಆರೋಪ ಮಾಡುತ್ತಿದೆ. ಆದರೆ ಬಿಜೆಪಿ ಅವಧಿಯಲ್ಲಿ ಎರಡು ಬಾರಿ ರೈತರ ಸಾಲಮನ್ನಾ ಮಾಡಲಾಗಿತ್ತು ಎನ್ನುವುದನ್ನು ನೆನಪಿಸಿ ಎಂದು ಹೇಳಿದರು. ಸಂಸದ ಪ್ರಹ್ಲಾದ್ ಜೋಶಿ, ಪ್ರಧಾನ ಕಾರ್ಯದರ್ಶಿ ಅರವಿಂದ ಲಿಂಬಾವಳಿ ಮುಂತಾದವರು ಉಪಸ್ಥಿತರಿದ್ದರು.

ಏರ್ ಇಂಡಿಯಾ ಪರಭಾರೆಗೆ ಒಪ್ಪಿಗೆ

ನವದೆಹಲಿ: ಭಾರತ ಸರಕಾರದ ಮಹಾರಾಜ ಎಂದೇ ಖ್ಯಾತಿಯ ವಾಯುಯಾನ ಸಂಸ್ಥೆ ಏರ್ ಇಂಡಿಯಾ ಮಾರಾಟಕ್ಕೆ ಕೇಂದ್ರ ಸಚಿವ ಸಂಪುಟ ಇಂದು ತಾತ್ವಿಕ ಒಪ್ಪಿಗೆ ನೀಡಿದೆ.

ಈ ಕುರಿತು ಮಾತನಾಡಿದ ಹಣಕಾಸು ಸಚಿವ ಅರುಣ್ ಜೇಟ್ಲಿ ಅವರು, ಏರ್ ಇಂಡಿಯಾದಂತೆ ಇನ್ನು ಕೆಲವು ಸಂಸ್ಥೆಗಳು ಖಾಸಗೀಕರಣದ ಮಾರ್ಗವನ್ನು ಹಿಡಿಯಲಿವೆ ಎಂದು ವಿವರಿಸಿದರು. ಡಾ. ಮನಮೋಹನ್ ಸಿಂಗ್ ಸರಕಾರವು 2012ರಲ್ಲಿ 10 ವರ್ಷಗಳ ಅವಧಿಗೆ 30,000 ಕೋಟಿ ರೂ.ಗಳ ಪ್ಯಾಕೇಜ್ ಆಧಾರದಲ್ಲಿ ಏರ್ ಇಂಡಿಯಾ ಈವರೆಗೆ ಬದುಕುಳಿದಿದ್ದು ತನ್ನ ಹಣಕಾಸು ಸ್ಥಿತಿಯನ್ನು ಸುಧಾರಿಸುವ ದಿಶೆಯಲ್ಲಿ ಅದು ಯತ್ನಿಸುತ್ತಲೇ ಬಂದಿದೆ. ಕಡಿಮೆ ಮಟ್ಟದ ಕಚ್ಚಾ ತೈಲ ಬೆಲೆ ಹಾಗೂ ಪ್ರಯಾಣಿಕರ ಸಂಖ್ಯೆ ಗಮನಾರ್ಹವಾಗಿ ಏರಿಕೆಯಾದ ಕಾರಣ 2015–16ರಲ್ಲಿ ಏರ್ ಇಂಡಿಯಾ 105 ಕೋಟಿ ರೂ. ನಿರ್ವಹಣಾ ಲಾಭವನ್ನು ಗಳಿಸಿತ್ತು.

ಠೇವಣಿ ಅಂಗೀಕಾರ ಜಾಹೀರಾತಿನ ವಿವರ (2017–18)

'ಐಸಿಆರ್‌ಎ' ಇವರಿಂದ ಠೇವಣಿ ಯೋಜನೆಗಳಿಗೆ 'ಎಂಎಎ' ದರ್ಜೆ ನೀಡಲ್ಪಟ್ಟಿದೆ

HAVE A HOME A CAN FIN HOME
Can Fin Homes Ltd
(Sponsor : CANARA BANK)
HOME LOANS + DEPOSITS
Translating Dreams into Reality

ಕ್ಯಾನ್‌ಫಿನ್ ಹೋಮ್ಸ್ ಲಿ.
CIN: L85110KA1987PLC008699
ನೋಂ.ಕಛೇರಿ. ನಂ.29/1.
ಸರ್ ಎಮ್.ಎನ್. ಕೃಷ್ಣರಾವ್ ರಸ್ತೆ,
ಬಸವನಗುಡಿ, ಬೆಂಗಳೂರು 560 004.
ಫೋನ್: 080 26567655, 26565736
ಫ್ಯಾಕ್ಸ್: 080 26565746
e-mail : development@canfinhomes.com
website: www.canfinhomes.com

ಕಂಪನಿಯು ಸಾರ್ವಜನಿಕರಿಂದ (ಟ್ರಸ್ಟ್‌ಗಳು/ಶಿಕ್ಷಣ ಸಂಸ್ಥೆಗಳಿಂದ ಠೇವಣಿಗಳ ಸ್ವೀಕರಣೆ ಸೇರಿದಂತೆ) ಠೇವಣಿಗಳನ್ನು ಅಂಗೀಕರಿಸುವುದು. ಠೇವಣಿ ಯೋಜನೆಗಳು ಕೆಳಕಂಡಂತಿವೆ:

I. **ಸಾರ್ವಜನಿಕರಿಂದ ಠೇವಣಿಗಳು:**

ಸಾವಧಿ ಠೇವಣಿ / ಸಂಚಿತ ಠೇವಣಿ

1. **ಸಾವಧಿ ಠೇವಣಿ ಯೋಜನೆ:** (29/06/2017 ರಿಂದ)

ಠೇವಣಿ ಅವಧಿ ತಿಂಗಳುಗಳಲ್ಲಿ	ಠೇವಣಿಗಳು ರೂ.1 ಕೋಟಿವರೆಗೆ		ಒಟ್ಟು ಠೇವಣಿ: >ರೂ. 1 ಕೋಟಿ
	ಸಾಮಾನ್ಯರು	ಹಿರಿಯ ನಾಗರಿಕರು	
12	7.00%	7.50%	7.00%
13–36	7.10%	7.60%	7.10%
37–60	7.25%	7.75%	7.25%

• ಕನಿಷ್ಠ ಠೇವಣಿ ಮೊತ್ತ: ₹ 20 ಲಕ್ಷಗಳು. • ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ/ವಾರ್ಷಿಕ ಬಡ್ಡಿ ಪಾವತಿಗೆ ಕನಿಷ್ಠ ಠೇವಣಿ ಮೊತ್ತ: ₹ 5 ಲಕ್ಷಗಳು • ಕನಿಷ್ಠ ಠೇವಣಿ ಅವಧಿ: 12 ತಿಂಗಳುಗಳು. • ಠೇವಣಿಗಳ ಮೇಲೆ ಬಡ್ಡಿಯನ್ನು ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ/ವಾರ್ಷಿಕವಾಗಿ ಪಾವತಿ ಮಾಡಲಾಗುವುದು.

2. **ಸಂಚಿತ ಠೇವಣಿ ಯೋಜನೆ:** (29/06/2017 ರಿಂದ)

ಠೇವಣಿ ಅವಧಿ ತಿಂಗಳುಗಳಲ್ಲಿ	ಠೇವಣಿಗಳು ರೂ.1 ಕೋಟಿವರೆಗೆ		ಒಟ್ಟು ಠೇವಣಿ: >ರೂ. 1 ಕೋಟಿ
	ಸಾಮಾನ್ಯರು	ಹಿರಿಯ ನಾಗರಿಕರು	
12	7.00%	7.50%	7.00%
13–36	7.10%	7.60%	7.10%
37–60	7.25%	7.75%	7.25%

• ಕನಿಷ್ಠ ಠೇವಣಿ ಮೊತ್ತ: ₹ 20,000/– • ಕನಿಷ್ಠ ಠೇವಣಿ ಅವಧಿ: 12 ತಿಂಗಳುಗಳು. • ಬಡ್ಡಿಯನ್ನು ತ್ರೈಮಾಸಿಕ ಆಧಾರದ ಮೇಲೆ ಸಂಯೋಜಿಸಲಾಗುವುದು.

3. ಹಿರಿಯ ನಾಗರಿಕರ (60 ವರ್ಷ ಮತ್ತು ಮೇಲ್ಪಟ್ಟು) ಠೇವಣಿಗಳ ಮೇಲೆ ಬಡ್ಡಿದರವು ಮೇಲೆ ತಿಳಿಸಿದ (1 ಮತ್ತು 2) ಬಡ್ಡಿದರಕ್ಕಿಂತ 0.50% ಹೆಚ್ಚು ನೀಡಲಾಗುವುದು.
4. ಸಿಬ್ಬಂದಿಯ ಠೇವಣಿಗಳ ಮೇಲೆ ಬಡ್ಡಿದರವು ಮೇಲೆ ತಿಳಿಸಿದ (1 ಮತ್ತು 2) ಬಡ್ಡಿದರಕ್ಕಿಂತ 1% ರಷ್ಟು ಹೆಚ್ಚು ನೀಡಲಾಗುವುದು.

II. **ವಿನಾಯಿತಿ ಪ್ರವರ್ಗದ ಠೇವಣಿಗಳು:**
ಸಾರ್ವಜನಿಕರ ಠೇವಣಿಗಳ ಹೊರತಾಗಿ ಇತರೆ ಠೇವಣಿಗಳನ್ನು ಪರಸ್ಪರ ಅಂಗೀಕಾರವಾದ ದರಗಳಲ್ಲಿ ಸ್ವೀಕರಿಸಲಾಗುವುದು.

III. **ಇತರೆ ನಿಯಮಗಳು ಮತ್ತು ಷರತ್ತುಗಳು:**

1. ಠೇವಣಿಗಳನ್ನು ಅಂಗೀಕರಿಸಲ್ಪಟ್ಟ ದಿನಾಂಕದಿಂದ ಮೂರು ತಿಂಗಳ ಅವಧಿಯ ಒಳಗಡೆ ಮರುಪಾವತಿ ಮಾಡಲಾಗುವುದಿಲ್ಲ. ಈ ಅವಧಿಯ ನಂತರ, ಅವಧಿ ಮುಗಿಯುವುದರ ಮುನ್ನ ಠೇವಣಿಗಳನ್ನು ಹಿಂತೆಗೆದುಕೊಂಡರೆ ಅಂತಹ ಠೇವಣಿಗಳಿಗೆ ಪಾವತಿಗೆ ಮಾಡಲಾಗುವ ಬಡ್ಡಿಯ ವಿವರ ಕೆಳಕಂಡಂತಿರುವುದು.
2. 1. 3 ತಿಂಗಳ ನಂತರ 6 ತಿಂಗಳು ಮುಗಿಯುವುದರ ಒಳಗೆ ಹಿಂತೆಗೆದುಕೊಳ್ಳುವ ಠೇವಣಿಗಳಿಗೆ : ಗರಿಷ್ಠ 4% ಬಡ್ಡಿದರವನ್ನು ವೈಯಕ್ತಿಕ ಠೇವಣಿಗೆ ನೀಡಲಾಗುವುದು ಮತ್ತು ಇತರೆ ಪ್ರವರ್ಗದ ಠೇವಣಿಗಳಿಗೆ ಬಡ್ಡಿದರವನ್ನು ನೀಡಲಾಗುವುದಿಲ್ಲ.
   2. 6 ತಿಂಗಳ ನಂತರ ಆದರೆ ಠೇವಣಿ ಅವಧಿಗೆ ಮುನ್ನ ಹಿಂತೆಗೆದುಕೊಂಡರೆ : ಕಂಪನಿಯಲ್ಲಿ ಠೇವಣಿಯು ಇದ್ದ ಅವಧಿಗೆ ಅನ್ವಯವಾಗುವ ಬಡ್ಡಿ ದರಕ್ಕಿಂತ 1% ಕಡಿಮೆ ಅಥವಾ ಆ ಅವಧಿಗೆ ಕಂಪನಿಯು ಸಾರ್ವಜನಿಕರಿಂದ ಯಾವುದೇ ಬಡ್ಡಿದರ ಇರದಿದ್ದಲ್ಲಿ ಸ್ವೀಕರಿಸುವ ಕನಿಷ್ಠ ಬಡ್ಡಿದರಕ್ಕಿಂತ 2% ಕಡಿಮೆ.
3. ಅವಧಿಗೆ ಮುನ್ನ ಠೇವಣಿಯನ್ನು ಮರುಪಾವತಿಸುವುದಾದರೆ ಮೊದಲು ಹೆಸರಿಸಿರುವ/ಏಕ ಠೇವಣಿದಾರರು ಸಮಾನ ಸಾಮರ್ಥ್ಯದಲ್ಲಿ ಹೂಡಿಟ್ಟ ಎಲ್ಲಾ ಠೇವಣಿಗಳನ್ನು ಒಂದೇ ಠೇವಣಿಯೆಂದು ಪರಿಗಣಿಸಲಾಗುವುದು.
4. ಠೇವಣಿಯ ನವೀಕರಣ ಅಥವಾ ಮರುಪಾವತಿಗಾಗಿ, ಸಹಿ ಮಾಡಿದ ಠೇವಣಿ ಪ್ರಮಾಣ ಪತ್ರವನ್ನು ಕಂಪನಿಗೆ ಒಪ್ಪಿಸಬೇಕು. ಠೇವಣಿಗಳ ನವೀಕರಣ ಮಾಡುವುದಾಗಿದ್ದರೆ, ಸಹಿ ಮಾಡಿದ ನಿಗದಿತ ಅರ್ಜಿಫಾರಂ ಅನ್ನು ಕಂಪನಿಗೆ ಸಲ್ಲಿಸಬೇಕು. ಠೇವಣಿಗಳನ್ನು ನವೀಕರಣ ಮಾಡದಿದ್ದ ಪಕ್ಷದಲ್ಲಿ ಠೇವಣಿಗಳ ಹಣವನ್ನು ಕ್ರಾಸ್ ಮಾಡಿದ "ಅಕೌಂಟ್ ಪೇಯಿ" ಚೆಕ್ಕುಗಳು/ಡ್ರಾಫ್ಟ್‌ನ ಮೂಲಕ ಮರುಪಾವತಿ ಮಾಡಲಾಗುವುದು.
5. ಪಾವತಿಯಾಗದೆ ಬಾಕಿ ಉಳಿದಿರುವ ಅವಧಿ ಮೀರಿದ ಠೇವಣಿಯ ನವೀಕರಣದ ಮೇಲೆ ಅನ್ವಯವಾಗುವ ಬಡ್ಡಿದರವು ಕೆಳಕಂಡಂತಿರುವುದು:
   (1) ಮುಕ್ತಾಯವಾದ ಅವಧಿಯು 14 ದಿನಗಳನ್ನು ಮೀರದಿದ್ದರೆ. : ಅವಧಿ ಮೀರಿದ ಠೇವಣಿಗೆ ಅವಧಿ ಮುಗಿದ ದಿನಾಂಕದಂದು ಜಾರಿಯಲ್ಲಿರುವ ಬಡ್ಡಿದರವು ಅನ್ವಯವಾಗುವುದು.
   (2) ಮುಕ್ತಾಯವಾದ ಅವಧಿಯು 14 ದಿನಗಳಿಗೂ ಹೆಚ್ಚಾಗಿದ್ದರೆ : ಅವಧಿ ಮೀರಿದ ಠೇವಣಿಯನ್ನು ಅವಧಿ ದಿನಾಂಕದಿಂದಲೇ ನವೀಕರಿಸಬಹುದು ಮುಗಿದ ಹಾಗೂ ಅವಧಿ ಪೂರ್ಣಗೊಂಡ ದಿನಾಂಕದಂದು ಜಾರಿಯಲ್ಲಿರುವ ಬಡ್ಡಿದರ ಅಥವಾ ಪ್ರಸ್ತುತದಲ್ಲಿ ಚಾಲ್ತಿಯಲ್ಲಿರುವ ಬಡ್ಡಿದರದಲ್ಲಿ ಯಾವುದು ಕಡಿಮೆ ಇರುವುದೋ ಆ ಬಡ್ಡಿದರ ಅನ್ವಯವಾಗುತ್ತದೆ.
6. ಠೇವಣಿ ಅಂಗೀಕರಿಸಿದ ದಿನಾಂಕದಿಂದ ಮೂರು ತಿಂಗಳು ಮುಗಿದ ನಂತರ ಠೇವಣಿಗಳ ಮೇಲೆ ಸಾಲವನ್ನು ನೀಡಲಾಗುವುದು.
7. ಕಾಲಕಾಲಕ್ಕೆ ಅನ್ವಯವಾಗುವಂತೆ 1961, ವರಮಾನ ತೆರಿಗೆ ಕಾಯಿದೆ ಉಪ ಬಂಧಗಳ ಅನ್ವಯವಾಗುವ ಕಡೆಗಳಲ್ಲಿ, ಪಾವತಿ ಮಾಡಲಾಗುವ ಬಡ್ಡಿ ಮೊತ್ತದಿಂದ/ಮೊಬಲಗಿನಿಂದ ಮೂಲದಲ್ಲಿಯೇ ವರಮಾನ ತೆರಿಗೆಯನ್ನು ಮುರಿದುಕೊಳ್ಳಲಾಗುವುದು.
8. ವಿನಾಯಿತಿಯುಳ್ಳ ಪ್ರವರ್ಗದ ಠೇವಣಿಗಳ ಹೊರತಾಗಿ ಉಳಿದ ಠೇವಣಿ ಯೋಜನೆಗಳು, ನ್ಯಾಷನಲ್ ಹೌಸಿಂಗ್ ಬ್ಯಾಂಕಿನಿಂದ ಕಾಲಕಾಲಕ್ಕೆ ನೀಡಲಾಗಿರುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
9. ಕಾಲಕಾಲಕ್ಕೆ ಅನ್ವಯವಾಗುವಂತೆ 1987ರ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಅಧಿನಿಯಮ ಉಪಬಂಧಗಳ ಅನ್ವಯ ಠೇವಣಿದಾರ(ದಾರರು) ತನ್ನ ನಿಯುಕ್ತ ವ್ಯಕ್ತಿಯೊಬ್ಬರನ್ನು ನಾಮಾಂಕಿತ ಮಾಡಬಹುದು.

IV. **ಬ್ಯಾಂಕಿಂಗೇತರ ಹಣಕಾಸು ಕಂಪನಿಗಳು ಮತ್ತು ಇತರೆ ಬ್ಯಾಂಕಿಂಗೇತರ ಕಂಪನಿಗಳ (ಜಾಹೀರಾತು) ನಿಯಮ 2013 ಅನ್ವಯ ವಿವರಗಳು:**

(ಎ) ಕಂಪನಿಯ ಹೆಸರು : ಕ್ಯಾನ್ ಫಿನ್ ಹೋಮ್ಸ್ ಲಿ.
(ಬಿ) ಸ್ಥಾಪನೆಯಾದ ದಿನಾಂಕ : 29ನೇ ಅಕ್ಟೋಬರ್, 1987
(ಸಿ) ಕಂಪನಿಯಿಂದ ಮತ್ತು ಅದರ ಸಹಾಯಕ ಸಂಸ್ಥೆಗಳಿಂದ ನಡೆಸಲಾಗುವ ವ್ಯವಹಾರ ಮತ್ತು ಅದರ ಶಾಖೆಗಳು ಮತ್ತು ಘಟಕಗಳ ವಿವರ : ನಿವೇಶನಗಳ/ವಾಸದ ಮನೆಗಳ/ಫ್ಲಾಟ್‌ಗಳ ಹಾಗೂ ವಸತಿಯೇತರ ಸಾಲಗಳು ಅಂದರೆ ಅಡಮಾನ ಸಾಲಗಳು, ಆಸ್ತಿ ವಿರುದ್ಧ ಸಾಲಗಳು ಇತ್ಯಾದಿಗಾಗಿ ಹಣಕಾಸು ಸಾಲ ಸೌಲಭ್ಯ ಒದಗಿಸುವುದು.

ಶಾಖೆಗಳ ವಿವರ: ಆಗ್ರ, ಅಹಮದಾಬಾದ್, ಬೆಂಗಳೂರು (ಬಸವನಗುಡಿ, ಬಿಡದಿ, ಕನ್ನಿಂಗ್‌ಹ್ಯಾಮ್ ರಸ್ತೆ, ದೇವನಹಳ್ಳಿ, ಇಲೆಕ್ಟ್ರಾನಿಕ್ ಸಿಟಿ, ಹೆಸರಘಟ್ಟ ರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್, ಜಯನಗರ, ಕನಕಪುರ ರಸ್ತೆ, ಕೆಂಗೇರಿ, ಕೋರಮಂಗಲ, ಕೆ.ಆರ್. ಪುರಂ, ಮಾರತ್‌ಹಳ್ಳಿ, ಸಹಕಾರನಗರ, ಸರ್ಜಾಪುರ ರಸ್ತೆ, ಉತ್ತರಹಳ್ಳಿ, ವಿಜಯನಗರ, ನೆಲಮಂಗಲ, ಬೇಗೂರು, ಯಲಹಂಕ), ಬರೋಡ, ಬೆಳಗಾಂ, ಭೋಪಾಲ್, ಭುವನೇಶ್ವರ, ಕ್ಯಾಲಿಕಟ್, ಚಂಡೀಘಡ್, ಚೆನ್ನೈ (ಅಂಬತ್ತೂರ್, ಅಣ್ಣಾನಗರ, ಚೆಂಗಲ್ಪಟ್ಟು, ಓ.ಎಮ್.ಆರ್.–ಪೆರಂಗುಡಿ, ಪೊರೂರ್, ರೆಡ್‌ಹಿಲ್ಸ್, ಶ್ರೀಪೆರಂಬುದೂರ್, ತಾಂಬರಂ, ತಿರುವಳ್ಳೂರು) ಕೊಚಿನ್, ಕೊಯಮತ್ತೂರು (ಗಾಂಧೀಪುರಂ, ಪಿ.ಎನ್.ಪಾಳ್ಯಂ), ದಾವಣಗೆರೆ, ಡೆಹ್ರಾಡೂನ್, ದಾರುಹೇರಾ, ದಿಂಡಿಗಲ್, ಈರೋಡ್, ಫರೀದಾಬಾದ್, ಗೋವಾ, ಗುಂಟೂರು, ಗುರ್‌ಗಾಂವ್, ಗ್ರೇಟರ್ ನೊಯಿಡ, ಗ್ವಾಲಿಯರ್, ಹೊಸೂರು, ಹುಬ್ಬಳ್ಳಿ, ಹೈದರಾಬಾದ್ (ಗಚ್ಚಿಬೌಲಿ, ನಾಂಪಲ್ಲಿ, ಕೊಂಪಲ್ಲಿ, ಕುಕ್ಕಟ್ಪಲ್ಲಿ, ಎಲ್.ಬಿ. ನಗರ್, ರಾಮಚಂದ್ರಪುರಂ, ತಾರನಕ), ಇಂದೋರ್, ಜೈಪುರ, ಜೋಧ್‌ಪುರ, ಕಾಕಿನಾಡ, ಕರೀಂನಗರ್, ಕರ್ನಾಲ್, ಕರೂರ್, ಕೋಟ, ಲಖ್‌ನೌ, ಮದುರೈ, ಮಂಡ್ಯ, ಮಂಗಳೂರು, ಮೀರಟ್, ಮುಂಬಯಿ, ಮೈಸೂರು, ನಾಗಪುರ, ನಾಮಕ್ಕಲ್, ನಾಸಿಕ್, ನವಿ ಮುಂಬಯಿ, ನೆಲ್ಲೂರ್, ನವದೆಹಲಿ, ನೊಯಿಡ, ನ್ಯೂ ಪನ್ವೇಲ್, ಒಂಗೋಲ್, ಪಾಟ್ನಾ, ಪೀತಂಪುರ, ಪಾಂಡಿಚೆರಿ, ಪುಣೆ, ರಾಯ್‌ಪುರ, ರಾಜಮಂಡ್ರಿ, ರೋಹ್‌ತಕ್, ಸೇಲಂ, ಶಿವಮೊಗ್ಗ, ಸೋನೆಪತ್, ತಿರುಪತಿ, ತಿರುಚೆಂಗೋಡ್, ತಿರುನಲ್ವೇಲಿ, ತಿರುಪ್ಪೂರ್, ತ್ರಿಶೂರ್, ತ್ರಿಚಿ, ತಿರುವನಂತಪುರಂ, ತುಮಕೂರು, ಉದಯಪುರ್, ಉಡುಪಿ, ವಾರಣಾಸಿ, ವೆಲ್ಲೂರು, ವಿರುಧುನಗರ್, ವಿಜಯವಾಡ, ವಿಶಾಖಪಟ್ನಂ, ವಿಶಾಖಪಟ್ನಂ ಸ್ಟೀಲ್ ಪ್ಲಾಂಟ್, ವಾರಂಗಲ್, ಕರ್ನೂಲ್, ಖಮ್ಮಂ, ವಿಜಯನಗರಂ, ಅಜ್ಮೀರ್, ಅಂಬಾಲಾ, ಕುಂಬಕೋಣಂ, ತೂತುಕುಡಿ, ಕಲ್ಯಾಣ್, ಕಾನ್‌ಪುರ್, ಅಲಹಾಬಾದ್, ಗೊಲ್ಲಪುಡಿ, ಗಾಜಿಯಾಬಾದ್, ಮಾನಸರೋವರ್, ಹಾಸನ, ಬಿಲಾಸ್‌ಪುರ್, ಜಬಲ್‌ಪುರ್, ಏಲೂರು, ಬೆರ್‌ಹ್ಯಾಂಪುರ್, ಬೋಯಿಸಾರ್ (130)

ಕೈಗೆಟುಕುವ ವಸತಿ ಸಾಲ ಕೇಂದ್ರಗಳ ವಿವರ: ತೆನಾಲಿ, ಮನೆಸಾರ್, ರೇವರಿ, ದೊಡ್ಡಬಳ್ಳಾಪುರ, ರಾಮನಗರಂ, ಹೊಂಸೂರ್, ಮಂಡಿದೀಪ್, ಗೋಬಿಚೆಟ್ಟಿಪಾಳ್ಯಂ, ಸಂಗಾರೆಡ್ಡಿ, ಘಟ್ಕೇಸರ್, ಪಾಲ್ವಲ್, ಪಿತಾಂಪುರ್ (12)

ಸ್ಯಾಟಲೈಟ್ ಶಾಖೆಗಳ ವಿವರ: ಪೀಳಮೇಡು, ಕಳಕುಟ್ಟಂ, ತಿರುವೆಂಬೂರ್, ದುರ್ಗ್, ಎ.ಎಸ್.ರಾವ್ ನಗರ, ವೇಲೂರ್, ಗುಗ್ಗೈ, ತಿರುಮಂಗಲಂ, ಯಶವಂತಪುರ, ಗುಡುವಂಚೆರಿ, ಅತ್ತಿಬೆಲೆ, ಥಣಿಸಂದ್ರ, ಮಾಗಡಿ ರಸ್ತೆ, ಅರಕ್ಕೋಣಮ್, ಆಲುವ, ವೈಟ್‌ಫೀಲ್ಡ್, ಬನ್ನೇರುಘಟ್ಟ, ಕಾಂಚಿಪುರಂ, ಬಟ್ಲಗುಂಡು, ಕಾಕ್ಸ್ ಟೌನ್, ಕಡಲೂರ್, ಧಾರವಾಡ, ಕಂಗೆಯಂ, ಕುಮಾರಪಾಳ್ಯಂ, ನೆಯ್ಯಾಟಿಂಕರ, ಒಡ್ಡಂಚತ್ರಂ, ಪುದುಕೊಟ್ಟೈ, ವಿದ್ಯಾರಣ್ಯಪುರ, ವಿಳ್ಳುಪುರಂ, ಮೈಸೂರು–ವಿಜಯನಗರ, ಜೈಪೂರ್–ಜೋಥ್‌ವಾರ, ರಾಜರಾಜೇಶ್ವರಿನಗರ, ಪಳನಿ. (33)

(ಡಿ) ಕಂಪನಿಯ ಆಡಳಿತದ ಸಂಕ್ಷಿಪ್ತ ವಿವರಗಳು : ಕಂಪನಿಯ ಆಡಳಿತವನ್ನು ನಿರ್ದೇಶಕರುಗಳ ಮಂಡಳಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಸ್.ಕೆ. ಹೋತರವರು ನಿರ್ವಹಿಸುತ್ತಿದ್ದಾರೆ

(ಇ) **ನಿರ್ದೇಶಕರುಗಳ ಹೆಸರುಗಳು, ವಿಳಾಸ ಮತ್ತು ವೃತ್ತಿ:**

ಕ್ರ. ಸಂ.	ನಿರ್ದೇಶಕರ ಹೆಸರು	ವಿಳಾಸ	ಹುದ್ದೆಯ ಹೆಸರು	ವೃತ್ತಿ	ಡಿಐಎನ್
1.	ಶ್ರೀ ಕೆ.ಎನ್.ಪೃಥ್ವಿರಾಜ್	ಫ್ಲಾಟ್3, 2ನೇ ಮಹಡಿ ಭರಾ ಅಪಾರ್ಟ್‌ಮೆಂಟ್, 265, ಡಾ. ಶ್ರೀನಿವಾಸಯ್ಯ ರಸ್ತೆ, ಬಿಇಎಮ್‌ಎಲ್ ಲೇಔಟ್, 3ನೇ ಹಂತ ಆರ್.ಆರ್.ನಗರ, ಬೆಂಗಳೂರು 560 098.	ಅಧ್ಯಕ್ಷರು (ಸ್ವತಂತ್ರ ಕಾರ್ಯ-ನಿರ್ವಾಹಕೇತರ)	ಮಾಜಿ ಅಧ್ಯಕ್ಷರು & ವ್ಯವಸ್ಥಾಪಕ ನಿರ್ದೇಶಕರು, ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್	00115317
2.	ಶ್ರೀ ಸಾರದ ಕುಮಾರ್ ಹೋತ	ಫ್ಲಾಟ್ ನಂ.ಸಿ2–1043 (4ನೇ ಮಹಡಿ) "ಶೋಭಾ ತುಲಿಪ್" ಜೆ.ಪಿ.ನಗರ, 6ನೇ ಹಂತ, ಪುಟ್ಟೇನಹಳ್ಳಿ, ಬೆಂಗಳೂರು 560 076	ವ್ಯವಸ್ಥಾಪಕ ನಿರ್ದೇಶಕರು	ಪ್ರಧಾನ ವ್ಯವಸ್ಥಾಪಕರು ಕೆನರಾ ಬ್ಯಾಂಕ್	07491088
3.	ಶ್ರೀಮತಿ ಪಿ.ಪಿ. ಭಾರತಿ	ಫ್ಲಾಟ್ ನಂ.9. ಕಾಮಧೇನು ಅಪಾರ್ಟ್‌ಮೆಂಟ್ ನಂ.8, ಕಿಂಗ್‌ಸ್ಟನ್ ರಸ್ತೆ, ರಿಚ್‌ಮಂಡ್ ಟೌನ್, ಬೆಂಗಳೂರು 560 025	ಪ್ರವರ್ತಕ ಕಾರ್ಯ-ನಿರ್ವಾಹಕೇತರ ನಿರ್ದೇಶಕರು	ಕಾರ್ಯನಿರ್ವಾಹಕ ನಿರ್ದೇಶಕರು ಕೆನರಾ ಬ್ಯಾಂಕ್	06519925
4.	ಶ್ರೀ ಎಸ್.ಎ.ಕಡೂರ್	ಟಿ2, ಸುಖಾಶಯ ಅಪಾರ್ಟ್‌ಮೆಂಟ್ಸ್, ಪಂಪಮಹಾಕವಿ ರಸ್ತೆ, ಶಂಕರಪುರಂ, ಬಸವನಗುಡಿ, ಬೆಂಗಳೂರು 560 004	ಪ್ರವರ್ತಕ ಕಾರ್ಯ-ನಿರ್ವಾಹಕೇತರ ನಿರ್ದೇಶಕರು	ಪ್ರಧಾನ ವ್ಯವಸ್ಥಾಪಕರು, ಕೆನರಾ ಬ್ಯಾಂಕ್	06426095
5.	ಶ್ರೀ ಟಿ.ಎ.ರಾವ್	ಫ್ಲಾಟ್ ನಂ.402, 4ನೇಮಹಡಿ, ಮಹಾವೀರ್ ಸ್ಯಾಂಕ್‌ಟಮ್ ಅಪಾರ್ಟ್‌ಮೆಂಟ್ಸ್, ಬ್ಲಾಕ್–ಎ 7ನೇ ಕ್ರಾಸ್, ಲಾಲ್‌ಬಹಾದೂರ್ ಶಾಸ್ತ್ರಿ ನಗರ (ಎಲ್‌ಬಿಎಸ್ ನಗರ) ಹೆಚ್‌ಎಎಲ್ ಪೋಸ್ಟ್, ಬೆಂಗಳೂರು 560 025	ಸ್ವತಂತ್ರ ಕಾರ್ಯ-ನಿರ್ವಾಹಕೇತರ ನಿರ್ದೇಶಕರು	ಮಾಜಿ ನಿರ್ದೇಶಕರು (ಇಸಿ) ಎಕ್ಸ್‌ಪೋರ್ಟ್ ಇಂಪೋರ್ಟ್ ಬ್ಯಾಂಕ್ ಆಫ್ ಇಂಡಿಯಾ	05273533
6.	ಶ್ರೀ ನಾಗನಾಥನ್ ಜಿ.	ಆರ್.ಕೆ. ಕುಮಾರ್ & ಕೋ. ಚಾರ್ಟರ್ಡ್ ಅಕೌಂಟೆಂಟ್ 2ನೇ ಮಹಡಿ, ಕಾಂಗ್ರೆಸ್ ಬಿಲ್ಡಿಂಗ್, ಹಳೆ ಸಂಖ್ಯೆ 573, ಅಣ್ಣಾ ಸಾಲೈ ಚೆನ್ನೈ 600 006	ಹೆಚ್ಚುವರಿ ನಿರ್ದೇಶಕರು (ಸ್ವತಂತ್ರ)	ಚಾರ್ಟರ್ಡ್ ಅಕೌಂಟೆಂಟ್	00423686

ಕಂಪನಿಯ ಆರ್ಥಿಕ ಸ್ಥಿತಿ:

(ಎಫ್) ಮತ್ತು (ಜಿ) ಜಾಹಿರಾತಿನ ದಿನಾಂಕದ ತಕ್ಷಣದ ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಕಂಪನಿಯಿಂದ ಘೋಷಿಸಲಾಗಿರುವ ಲಾಭಾಂಶಗಳು ಮತ್ತು ತೆರಿಗೆ ವ್ಯವಸ್ಥೆ ಮಾಡುವ ಮುನ್ನ ಮತ್ತು ಅನಂತರದ ಕಂಪನಿಯ ಲಾಭ:

ಕೊನೆಗೊಂಡ ವರ್ಷ	ಲಾಭ(₹ ಲಕ್ಷಗಳಲ್ಲಿ)		ಘೋಷಿಸಲಾದ ಲಾಭಾಂಶ %	ಬಡ್ಡಿ ವ್ಯಾಪ್ತಿ ಅನುಪಾತ %
	ತೆರಿಗೆ ಮುನ್ನ	ತೆರಿಗೆಯ ನಂತರ		
31ನೇ ಮಾರ್ಚ್ 2015	13745.21	8624.30	70.0	126
31ನೇ ಮಾರ್ಚ್ 2016	25386.07	15710.51	100	132
31ನೇ ಮಾರ್ಚ್ 2016	37016.53	23525.88	100	140

(ಹೆಚ್) ಕೆಳಕಂಡ ದಿನಾಂಕದಂದು ಇದ್ದಂತೆ ಪರಿಶೋಧಿತ ಬ್ಯಾಲೆನ್ಸ್ ಶೀಟುಗಳಲ್ಲಿ ಕಂಡುಬರುವಂತೆ ಕಂಪನಿಯ ಸಂಕ್ಷಿಪ್ತ ಆರ್ಥಿಕ ಪರಿಸ್ಥಿತಿ: (₹ ಲಕ್ಷಗಳಲ್ಲಿ)

ಹೊಣೆಗಾರಿಕೆಗಳು	31/03/17	31/03/16	31/03/15	ಆಸ್ತಿಗಳು	31/03/17	31/03/16	31/03/15
ಷೇರು ಬಂಡವಾಳ	2662.25	2662.25	2662.25	ಸ್ಥಿರಾಸ್ತಿಗಳು	1016.97	888.75	927.75
ಮೀಸಲು ಮತ್ತು ಹೆಚ್ಚುವರಿ ನಿಧಿ	104967.64	85141.76	74486.48	ಪ್ರಸಕ್ತವಲ್ಲದ ಹೂಡಿಕೆಗಳು	1593.50	1493.50	1493.50
ಶೇರು ಅರ್ಜಿ ಹಂಚಿಕೆಯ ಬಾಕಿ ಉಳಿಕೆ ಮೊತ್ತ	47.62	47.62	47.62	ದೀರ್ಘಕಾಲದ ಸಾಲ ಹಾಗೂ ಮುಂಗಡಗಳು	1327953.38	1061670.09	820697.51
ಪ್ರಸಕ್ತವಲ್ಲದ ಹೊಣೆಗಾರಿಕೆಗಳು	822348.19	709198.08	553281.63	ಪ್ರಸಕ್ತ ಆಸ್ತಿಗಳು	15199.39	11543.57	10316.67
ಪ್ರಸಕ್ತ ಹೊಣೆಗಾರಿಕೆಗಳ	415737.54	278546.19	202957.45				
ಒಟ್ಟು	1345763.24	1075595.91	833435.43	ಒಟ್ಟು	1345763.24	1075595.91	833435.43

(ಐ) ಕಳೆದ 3 ವರ್ಷಗಳಲ್ಲಿ ಕಂಪನಿಯ ಲೆಕ್ಕಪರಿಶೋಧಕ ನೀತಿಗಳಲ್ಲಿ ಲಾಭ ಮತ್ತು ಮೀಸಲಿನ ಮೇಲೆ ಬದಲಾವಣೆ : ಇಲ್ಲ

(ಜೆ) ಆಡಳಿತ ಮಂಡಳಿಯ ದೃಷ್ಟಿಯಲ್ಲಿ ಅಪಾಯದ ಅಂಶಗಳು:
ಆರ್ಥಿಕ ಪರಿಸರದಲ್ಲಿ, ನಿಖರವಾಗಿ ಬಡ್ಡಿದರಗಳು ನಿರ್ದಿಷ್ಟ ಅಪಾಯಗಳಿಗೆ ಅಂದರೆ, ವಸತಿ ಹಣಕಾಸು ಕಂಪನಿಗಳು ಹೆಚ್ಚು ಗುರಿಯಾಗುವಂತೆ ಮಾಡುತ್ತದೆ. ಸಾಲದ ಅಪಾಯ, ದ್ರವ್ಯತೆ ಅಪಾಯ ಮತ್ತು ಬಡ್ಡಿದರದ ಅಪಾಯ. ಕಂಪನಿಯು ಲಿಕ್ವಿಡಿಟಿ ಸಂಭಾವ್ಯ ಹೊಣೆಗಾರಿಕೆಗಳು, ಪ್ರತಿ ವರ್ಷ ಮಂಡಳಿಯು ಮೇಲಿನ ನೀತಿ ಮತ್ತು ಮಾರ್ಗದರ್ಶಿಗಳನ್ನು ಪರಿಷ್ಕರಿಸುತ್ತದೆ.

(ಕೆ) ಮರುಪಾವತಿಯನ್ನು ಡೀಫಾಲ್ಟ್ ವಿವರಗಳು, ಮೊತ್ತ ಒಳಗೊಂಡಿರುವುದು ಸೇರಿದಂತೆ, ಡೀಫಾಲ್ಟ್ ಅವಧಿ ಮತ್ತು ಪ್ರಸ್ತುತ ಸ್ಥಿತಿ ಸೇರಿದಂತೆ:
ಅ) ಶಾಸನಬದ್ಧ ಬಾಕಿ : ಇಲ್ಲ
ಆ) ಸಾಲ ಪತ್ರ ಮತ್ತು ಬಡ್ಡಿ : ಇಲ್ಲ
ಇ) ಯಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಯ ಸಾಲ ಮತ್ತು ಅದರ ಬಡ್ಡಿ : ಇಲ್ಲ
ಅನಿಶ್ಚಿತ ಬಾಧ್ಯತೆಗಳು : ₹ 8.02 ಕೋಟಿಗಳು
(ಮೇಲ್ಮನವಿ ಸಲ್ಲಿಸಲಾಗಿರುವ/ಶೇಳಕೆಯಲ್ಲಿರುವ ವಿವಾದಿತ ವರಮಾನ ತೆರಿಗೆ ಬಡ್ಡಿ ತೆರಿಗೆಯನ್ನು ಹೊಣೆಗಾರಿಕೆಯೆಂದು ಪರಿಗಣಿಸಲಾಗಿಲ್ಲ.)

(ಎಲ್) ಈ ಜಾಹೀರಾತಿನ ದಿನಾಂಕದಿಂದ ಹಿಂದಿನ 3 ವರ್ಷಗಳ ಲೆಕ್ಕಪರಿಶೋಧನಾ ನಗದು ಹರಿವು ಹೇಳಿಕೆ (₹ ಲಕ್ಷಗಳಲ್ಲಿ)

3 ವರ್ಷಗಳ ನಗದು ಹರಿವು

		31 ಮಾರ್ಚ್ 2017 ವರ್ಷಕ್ಕೆ ಕೊನೆಗೊಂಡಂತೆ	31 ಮಾರ್ಚ್ 2016 ವರ್ಷಕ್ಕೆ ಕೊನೆಗೊಂಡಂತೆ	31 ಮಾರ್ಚ್ 2015 ವರ್ಷಕ್ಕೆ ಕೊನೆಗೊಂಡಂತೆ
ಎ	**ಕಾರ್ಯ ಚಟುವಟಿಕೆಗಳಿಂದಾದ ನಗದು ಹರಿವು ತೆರಿಗೆ ಮುನ್ನ ನಿವ್ವಳ ಲಾಭ ಮತ್ತು ವಿಶೇಷ ಅಂಶಗಳು**	**38,838.06**	**27,326.61**	**15,169.98**
	ಹೊಂದಾಣಿಕೆಗಳು:			
	ಇಳಿತಾಯ	373.22	346.45	373.25
	ಸ್ವತ್ತುಗಳ ಮಾರಾಟದ(ಲಾಭ)/ನಷ್ಟ	3.37	–25.39	–36.72
	ಎಸ್‌ಎಲ್‌ಆರ್ ಠೇವಣಿಯ ಮೇಲಿನ ಬಡ್ಡಿ	–215.47	–164.85	–136.85
	ಕೆಟ್ಟ ಸಾಲಗಳ ವಜಾ/ಹಿಂಪಡೆತ	85.31	329.37	210.08
	ನಿವೃತ್ತಿಯ ಲಾಭಗಳಿಗೆ ಮೀಸಲು	459.21	407.50	215.90
	ನಿರ್ವಹಣಾ ಬಂಡವಾಳ ಬದಲಾವಣೆಯ ಮುನ್ನದ ಲಾಭ	**39,543.70**	**28,219.68**	**15,795.65**
	ಹೊಂದಾಣಿಕೆಗಳು:			
	ಪ್ರಸಕ ಸ್ವತ್ತುಗಳು	–9,868.73	–4,433.70	–251.42
	ಪ್ರಸಕ್ತ ಹೊಣೆಗಾರಿಕೆಗಳು	10,346.39	22,180.60	–6,069.62
		477.67	**17,746.90**	**–6,321.04**
	ಕಾರ್ಯಾಚರಣೆಗಳಿಂದಾದ ನಗದು	40,021.36	45,966.58	9,476.61
	ನೇರ ತೆರಿಗೆ ಪಾವತಿ	–8,147.86	–7,771.81	–4,181.09
	ವಿಶೇಷ ಅಂಶಗಳ ಮುನ್ನದ ನಗದು ಹರಿವು	31,873.51	38,194.77	5,293.52
	ಕಾರ್ಯಚಟುವಟಿಕೆಗಳ ನಿವ್ವಳ ನಗದು(ಎ)	**31,873.51**	**38,194.77**	**5,293.52**
ಬಿ.	**ಹೂಡಿಕೆಯ ಚಟುವಟಿಕೆಗಳ ನಗದು ಹರಿವು**			
	ಸ್ಥಿರಾಸ್ತಿಗಳ ಖರೀದಿ	–450.04	–317.67	–537.03
	ಸ್ಥಿರಾಸ್ತಿಗಳ ಮಾರಾಟ	3.99	35.58	46.54
	ಹೂಡಿಕೆಗಳ ಖರೀದಿ	–349.00	–945.00	–
	ಹೂಡಿಕೆಗಳ ಮಾರಾಟ	–	–	–
	ಸ್ವೀಕರಿಸಲಾದ ಬಡ್ಡಿ	193.90	147.19	136.85
	ಹೂಡಿಕೆ ಚಟುವಟಿಕೆಗೆ ಬಳಸಲಾದ ನಗದು(ಬಿ)	**–601.15**	**–1079.90**	**–353.64**
ಸಿ.	**ಹಣಕಾಸು ಚಟುವಟಿಕೆಗಳ ನಗದು ಹರಿವು**			
	ಷೇರು ಬಂಡವಾಳದ ವಿತರಣೆಯ ವರಮಾನ	0.00	0.00	27,339.47
	ದೀರ್ಘಾವಧಿ ಸಾಲಗಳು (ನಿವ್ವಳ ಮರುಪಾವತಿ)	2,38,935.22	2,06,452.44	2,07,670.00
	ಸಾಲಗಳು(ನಿವ್ವಳ ಮರುಪಾವತಿ)*	–2,66,991.37	–2,41,391.32	–2,38,966.65
	ಪಾವತಿಸಿದ ಲಾಭಾಂಶ	–3,205.23	–2,185.99	–1557.84
	ಹಣಕಾಸು ಚಟುವಟಿಕೆಗಳಿಗೆ ಬಳಸಲಾದ ನಿವ್ವಳ ನಗದು(ಸಿ)	**–31,261.28**	**–37,124.86**	**–5515.01**
	ನಗದು ಮತ್ತು ತತ್ಸಮಾನದ ನಿವ್ವಳ(ಕಡಿಮೆ)/ಹೆಚ್ಚಳ (ಎ)+(ಬಿ)+(ಸಿ)	11.09	– 9.99	–575.14
ಡಿ.	ನಗದು ಮತ್ತು ತತ್ಸಮಾನದ ಆರಂಭಿಕ ಶುಲ್ಕ	330.22	340.21	915.35
ಇ.	ನಗದು ಮತ್ತು ತತ್ಸಮಾನದ ಅಂತಿಮ ಶುಲ್ಕ	341.29	330.22	340.21
	ನಗದು ಮತ್ತು ತತ್ಸಮಾನದ ನಿವ್ವಳ(ಕಡಿಮೆ)/ಹೆಚ್ಚಳ (ಇ)–(ಡಿ)	**11.07**	**–9.99**	**–575.14**

* ಸುರಕ್ಷಿತ ಸ್ವತ್ತುಗಳನ್ನೊಳಗೊಂಡ.

V. **ಠೇವಣಿ ಯೋಜನೆಗಳ ವಿವರಗಳು**
ಎ. ಮಂಡಳಿಯ ನಿರ್ಣಯದ ರವಾನೆಯ ದಿನಾಂಕ : ಜೂನ್ 23, 2017
ಬಿ. ಸಾಮಾನ್ಯ ಸಭೆಯಲ್ಲಿ ನಿರ್ಣಯವಾದ ಠೇವಣಿಗಳ ಅಧಿಕೃತ ಆಹ್ವಾನದ ದಿನಾಂಕ : ಜೂನ್ 28, 2017
ಸಿ. ಠೇವಣಿಗಳ ವರ್ಗ, ಅಂದರೆ, ಸುರಕ್ಷಿತ ಅಥವಾ ಅಸುರಕ್ಷಿತ : ಅಸುರಕ್ಷಿತ ಠೇವಣಿಗಳು
ಡಿ. ಇತರೆ ಮಾಹಿತಿ

ಕ್ರ.ಸಂ.	ವಿವರಗಳು	₹ ಕೋಟಿಗಳಲ್ಲಿ
(ಎ)	31/03/2017ರಂದು ಇದ್ದಂತೆ 2010ರ ಗೃಹ ನಿರ್ಮಾಣ ಹಣಕಾಸು ಕಂಪನಿಗಳ (ಎನ್‌ಹೆಚ್‌ಬಿ) ನಿರ್ದೇಶನಗಳ ಅನ್ವಯ ನಿಗದಿಪಡಿಸಲಾಗಿರುವ ಸಾಲಪಡೆದು ಕೊಳ್ಳುವಿಕೆಗಳು ಸೇರಿದಂತೆ ಮೊಬಲಗು (ಅಂದರೆ ಎನ್‌ಹೆಚ್‌ಬಿಯ ಪರಿಷ್ಕೃತ ನಿರ್ದೇಶನಗಳ ಅನ್ವಯ ಹೊಂದಿರುವ ನಿವ್ವಳ ನಿಧಿಗಳ 16 ಪಟ್ಟು)	: 17220.80
(ಬಿ)	31/03/2017ರಂದು ಇದ್ದಂತೆ ಮೇಲೆ ತಿಳಿಸುವುದರಲ್ಲಿ 2010ರ ಎನ್‌ಹೆಚ್‌ಬಿ ನಿರ್ದೇಶನಗಳ ಪ್ಯಾರ 3(1)(ಐ)ರ ಪ್ರಕಾರ ಕಂಪನಿಯು ಸಂಗ್ರಹಿಸಬಹುದಾದ ಸಾರ್ವಜನಿಕ ಠೇವಣಿಯ ಮೊಬಲಗು	: 5381.50
(ಸಿ)	31/03/2017ರಂದು ಇದ್ದಂತೆ ಕಂಪನಿಯು ಹೊಂದಿದ್ದ ಸಾರ್ವಜನಿಕ ಠೇವಣಿಗಳ ಮೊಬಲಗು (ವಾರಸುದಾರರಿಲ್ಲದ ಠೇವಣಿಗಳನ್ನು ಹೊರತುಪಡಿಸಿ)	: 189.67
(ಡಿ)	31/03/2017ರಂದು ಕಂಪನಿಯು ಹೊಂದಿದ್ದ ಒಟ್ಟು ಠೇವಣಿ (ರೂ.17.06 ಕೋಟಿ ಮೊತ್ತದ ವಾರಸುದಾರರಿಲ್ಲದ ಠೇವಣಿಗಳನ್ನು ಹೊರತುಪಡಿಸಿ)	: 226.65
(ಇ)	31/03/2017ರಂದು ಒಟ್ಟು ಠೇವಣಿದಾರರ ಸಂಖ್ಯೆ	: 11844

ಇ. ಮಿತಿಮೀರಿದ ಠೇವಣಿಗಳು, ವಾರಸುದಾರರಿಲ್ಲದ ಠೇವಣಿಗಳಲ್ಲದೆ ಯಾವುದಾದರೂ : ಇಲ್ಲ
ಎಫ್. ಒಟ್ಟು ಠೇವಣಿಗಳ ಮೊಬಲಗು ಮರುಪಾವತಿ ಪಡೆಯದೆ ಹಾಗೆಯೇ ಬಿಟ್ಟಿರುವ ಠೇವಣಿಗಳ ಹೊರತಾಗಿ, ಕಂಪನಿಯು ಯಾವುದೇ ಅವಧಿ ಮೀರಿದ ಠೇವಣಿಗಳನ್ನು ಹೊಂದಿರುವುದಿಲ್ಲ ಮೇಲೆ ತಿಳಿಸಿದ ಎನ್‌ಹೆಚ್‌ಬಿ 2010ರ ನಿರ್ದೇಶನಗಳ ಪ್ಯಾರ 17(1)(ಹೆಚ್)ರ ಅನ್ವಯ : ಇಲ್ಲ
ಜಿ. ಕಂಪನಿ ಈ ಮೂಲಕ ಘೋಷಿಸುವುದೇನೆಂದರೆ:

1. ಕಂಪನಿಯು, ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಅಧಿನಿಯಮ 1987ರ ಪ್ರಕರಣ 29ಎ ಅನ್ವಯ ನ್ಯಾಷನಲ್ ಹೌಸಿಂಗ್ ಬ್ಯಾಂಕ್ (ಎನ್‌ಹೆಚ್‌ಬಿ) ಇದರಿಂದ ನೀಡಲಾದ ದಿನಾಂಕ 31/07/2001ರ ಕ್ರಮಬದ್ಧವಾಗಿರುವ ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಅನ್ನು ಹೊಂದಿದೆ. ಆದರೂ, ಕಂಪನಿಯ ಆರ್ಥಿಕ ಸದೃಢತೆಯ ಪ್ರಸಕ್ತ ಪರಿಸ್ಥಿತಿ ಅಥವಾ ಯಾವುದೇ ಹೇಳಿಕೆಗಳ ನಿಖರತೆ ಅಥವಾ ಕಂಪನಿ ಮಾಡಿರುವ ಪ್ರತಿನಿಧಿತ್ವ ಅಥವಾ ವ್ಯಕ್ತಪಡಿಸಿರುವ ಅಭಿಪ್ರಾಯದ ಬಗ್ಗೆ ಮತ್ತು ಠೇವಣಿಗಳ ಮರುಪಾವತಿ/ಕಂಪನಿಯಿಂದ ಹೊಣೆಗಾರಿಕೆಗಳನ್ನು ಪೂರ್ಣಗೊಳಿಸುವಿಕೆಯ ಬಗ್ಗೆ ಎನ್‌ಹೆಚ್‌ಬಿ ಯಾವುದೇ ಜವಾಬ್ದಾರಿ ಅಥವಾ ಖಾತರಿಯನ್ನು ಒಪ್ಪಿಕೊಳ್ಳುವುದಿಲ್ಲ.
2. ಕಂಪನಿಯು ಅದಕ್ಕೆ ಅನ್ವಯವಾಗುವ ನ್ಯಾಷನಲ್ ಹೌಸಿಂಗ್ ಬ್ಯಾಂಕಿನ ನಿರ್ದೇಶನಗಳ ಉಪಬಂಧಗಳನ್ನು ಪರಿಪಾಲಿಸಿದೆ.
3. ಈ ನಿರ್ದೇಶನಗಳನ್ನು ಪರಿಪಾಲಿಸಿದ ಮಾತ್ರಕ್ಕೆ ಠೇವಣಿಗಳ ಮರುಪಾವತಿ ಬಗ್ಗೆ ನ್ಯಾಷನಲ್ ಹೌಸಿಂಗ್ ಬ್ಯಾಂಕಿನ (ಎನ್‌ಹೆಚ್‌ಬಿ) ಖಾತರಿಯಿರುವುದೆಂದು ಭಾವಿಸಲಾಗದು.
4. ಕಂಪನಿಯಿಂದ ಅಂಗೀಕರಿಸಲಾದ ಠೇವಣಿಗಳು ಭದ್ರತೆ ಇಲ್ಲದವುಗಳಾಗಿದ್ದು ಇತರೆ ಭದ್ರತೆ ಇಲ್ಲದ ಹೊಣೆಗಾರಿಕೆಗಳಂತೆಯೇ ಇರುವುದು.
5. ನಿರ್ದೇಶಕರ ಮಂಡಳಿಯು ವ್ಯವಹಾರಗಳ ಮತ್ತು ಕಂಪನಿಯ ಭವಿಷ್ಯದ ಬಗ್ಗೆ ಸಂಪೂರ್ಣವಾಗಿ ಒಪ್ಪಿ ಅವರು ಕಂಪನಿಯ ಅಂದಾಜು ಮುಂದಿನ ಆರ್ಥಿಕ ಸ್ಥಾನಕ್ಕೆ ಸಂಬಂಧಿಸಿದಂತೆ ಕಂಪನಿ ತನ್ನ ಬಾಧ್ಯತೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ ಹಾಗೂ ಕಂಪನಿಯು ಸಾಲಗಳು ಮರುಪಾವತಿಸಬೇಕಾದಾಗ ತನ್ನ ಎಲ್ಲಾ ಸಾಲಗಳನ್ನು ಎದುರಿಸಲು ಅರ್ಹವಾಗಿದೆ ಮತ್ತು ಸುತ್ತೋಲೆ ಹೊರಡಿಸಿದ ಅಥವಾ ಜಾಹೀರಾತಿನ ದಿನಾಂಕದಿಂದ ಒಂದು ವರ್ಷದೊಳಗೆ ದಿವಾಳಿಯಾಗುವುದಿಲ್ಲ ಎಂಬ ಅಭಿಪ್ರಾಯ ಹೊಂದಿರುತ್ತಾರೆ.
6. ಕಂಪನಿಯು ಕಂಪನಿಗಳ ಕಾಯಿದೆಗಳನ್ನು ಮತ್ತು ಅನ್ವಯವಾಗುವ ನಿಯಮಗಳನ್ನು ಅನುಸರಿಸಿದೆ.
   "ಅಲ್ಲಗಳೆತ – ರಿಜಿಸ್ಟ್ರಾರ್ ಅಥವ ಕೇಂದ್ರ ಸರ್ಕಾರದ ಅನುಮೋದಿಸಿರುವ ಕಡತವನ್ನು ಸುತ್ತೋಲೆ ಅಥವಾ ಜಾಹೀರಾತಿನ ನಮೂನೆಯಲ್ಲಿ ಪರಿಗಣಿಸಲಾಗಿದೆ ಅಥವ ನಿರ್ಬಂಧಿಸಲಾಗಿದೆ ಎಂದು ಸ್ಪಷ್ಟವಾಗಿ ಅರ್ಥೈಸಲಾಗಿದೆ. ಸುತ್ತೋಲೆ ಅಥವ ಜಾಹೀರಾತಿನ ನಮೂನೆಯ ಸುತ್ತೋಲೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವಂತೆ ಯಾವುದೇ ಠೇವಣಿ ಯೋಜನೆಯಲ್ಲಿ ಹೇಳಿರುವಂತೆ ಆರ್ಥಿಕ ಸುಸ್ಥಿತಿಯ ಹೊಣೆಗಾರಿಕೆಯನ್ನು ರಿಜಿಸ್ಟ್ರಾರ್ ಅಥವ ಕೇಂದ್ರ ಸರ್ಕಾರ ತೆಗೆದುಕೊಳ್ಳುವುದಿಲ್ಲ. ಠೇವಣಿದಾರರು ಹೂಡಿಕೆಗೂ ಮುನ್ನ ಠೇವಣಿ ಯೋಜನೆಗಳಲ್ಲಿ ಶ್ರದ್ಧೆವಹಿಸಬೇಕು".
   [29/06/2016ರ ಕಂಪನಿಗಳ ಕಾರ್ಪೋರೇಟ್ ವ್ಯವಹಾರ ಸಚಿವಾಲಯ ಪ್ರಕಟಣೆ ಪ್ರಕಾರ (ಠೇವಣಿಗಳ ಅಂಗೀಕಾರ) ತಿದ್ದುಪಡಿ ನಿಯಮಗಳು 2016–ಡಿಪಿಟಿ 1 ಹಕ್ಕುತ್ಯಾಗ]
7. ಸಾಲ ಸ್ಥಾನದಲ್ಲಿ ಯಾವುದೇ ಪ್ರತಿಕೂಲ ಬದಲಾವಣೆ ಇದ್ದಲ್ಲಿ, ಠೇವಣಿದಾರರು ಯಾವುದೇ ದಂಡವಿಲ್ಲದೆ ಠೇವಣಿಯನ್ನು ಹಿಂಪಡೆದುಕೊಳ್ಳಬಹುದು.
   (ತಿದ್ದುಪಡಿ ನಿಯಮಗಳು, 2016 (ಠೇವಣಿಗಳ ಅಂಗೀಕಾರ) – ಈ ಘೋಷಣೆಯು ಖಾತೆಗಳ ಟಿಪ್ಪಣಿಯಲ್ಲಿರುತ್ತದೆ.
8. ಯಾವುದೇ ಕ್ರೆಡಿಟ್ ರೇಟಿಂಗ್‌ನ ಪ್ರತಿಕೂಲ ಬದಲಾವಣೆಯ ಸಂದರ್ಭದಲ್ಲಿ, ಠೇವಣಿದಾರರಿಗೆ ಠೇವಣಿಯನ್ನು ಹಿಂಪಡೆಯಲು ಒಂದು ಅವಕಾಶವಿರುತ್ತದೆ.

ಠೇವಣಿ ಜಾಹೀರಾತಿನ ಈ ವಿವರಗಳನ್ನು ಕಂಪನಿಯ ನಿರ್ದೇಶಕರುಗಳ ಮಂಡಳಿಯ ಅಧಿಕಾರದಲ್ಲಿ ಮತ್ತು ಅದರ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಈ ಜಾಹೀರಾತಿನ ಪಠ್ಯ ವಿಷಯವನ್ನು ದಿನಾಂಕ ಜೂನ್23, 2017ರಂದು ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಅಂಗೀಕರಿಸಲಾಗಿದೆ. ಇದರ ಒಂದು ಪ್ರತಿಯನ್ನು ಬೆಂಗಳೂರಿನಲ್ಲಿರುವ ಕಂಪನಿಗಳ ರಿಜಿಸ್ಟ್ರಾರ್, ಕರ್ನಾಟಕ ಇವರಿಗೆ ಮತ್ತು ನ್ಯಾಷನಲ್ ಹೌಸಿಂಗ್ ಬ್ಯಾಂಕ್, ನವದೆಹಲಿ ಇವರಿಗೆ ಸಲ್ಲಿಸಲಾಗುತ್ತಿದೆ.

ನಿರ್ದೇಶಕರುಗಳ ಮಂಡಳಿಯ ಪರವಾಗಿ ಮತ್ತು ಅವರ ಹೆಸರಿನಲ್ಲಿ
(ಸಹಿ/–)
ವೀಣಾ ಜಿ ಕಾಮತ್
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 23/06/2017